ಪ್ರಭಾವದಿಂದ ಬಿಡಿಸಿಕೊಳ್ಳುವುದೋ? ಆದರೆ ದೇವಣ್ಣ ಬಂದಿದ್ದೇ ಒಳ್ಳೆಯದಾಯಿತೆಂದು ವಾದಿಸುವವರೇನೂ ಕಡಿಮೆಯಿಲ್ಲ. ಹೊಟೇಲ್ ಬಂದಿದ್ದರ ಸಲುವಾಗಿಯೇ ಡಾಂಬರು ರಸ್ತೆ ಬಂದಿತು. ಹೈಸ್ಕೂಲು ಬಂದಿತು. ಮೋಟಾರ ಸೈಕಲ್ ಟ್ರ್ಯಾಕ್ಟರ್‌ಗಳು ಬಂದವು. ಊರು ಹೊಸದಾಯಿತು. ಇಲ್ಲದಿದ್ದರೆ ಹಳೆಯ ಗೌಡರ ಕಾಲಿಗೆ ನಮಸ್ಕಾರ ಮಾಡುತ್ತ ಅವರ ಮನೆಯ ಸೆಗಣಿ ಬಳಿಯಬೇಕಾಗಿತ್ತು. ಹೊಸ ತಲೆಮಾರಿನ ಕೆಲವು ಹಿರಿಯರು, ಹುಡುಗರು ಹೇಳುವರು. ಮಾಯಕ್ಕ ಬರದಿದ್ದರೆ ಹೆಣ್ಣುಮಕ್ಕಳಿಗೆ ಇಷ್ಟು ವೈವಿಧ್ಯದ ಸೀರೆಗಳು ಇವೆಯೆಂದೇ ತಿಳಿಯುತ್ತಿರಲಿಲ್ಲ. ರವಿಕೆಗಳು ಇಷ್ಟು ಆಕರ್ಷಕವಾಗಿರಬಹುದು ಎಂಬುದೇ ತಿಳಿದಿರಲಿಲ್ಲ! ಬ್ಯಾಂಕ್ ಬರುತ್ತಿರಲಿಲ್ಲ, ಸಾಲ ಸಿಗುತ್ತಿರಲಿಲ್ಲ. ಹೆಣ್ಣುಮಕ್ಕಳ ಕೈಯಲ್ಲಿ ಹಣ ಓಡಾಡುತ್ತಿರಲಿಲ್ಲ. ಯಲ್ಲವ್ವನಿಗೆ ಮಾತ್ರ ಇದ್ಯಾವುದೂ ಸಂತೋಷ ತಂದಿಲ್ಲ. ಆಕೆಗಿರುವ ಕೊರಗು ಎಂದರೆ ತನ್ನ ಮಕ್ಕಳು ತನ್ನ ಕನಸುಗಳನ್ನು ಹಾಳು ಮಾಡಿದರೆಂಬುದು.

'ದೊಡ್ಡ ಮಗ ಬಸಣ್ಣ ಮನಿ ಬಿಟ್ಟು ಹ್ವಾದ. ಎರಡನೆ ಮಗ ಶಿವಣ್ಣ ಹೊಟೇಲದಾಗ ಬಿದ್ದಿರತಾನ. ಮೂರನೆ ಮಗ ಸಿದ್ದಪ್ಪ ಒಬ್ಬನೇ ನನ್ನ ಮಾತು ಕೇಳಾಂವ. ನನಗ ಮೂರು ಮಕ್ಕಳಲ್ಲ, ಒಬ್ಬನೆ ಮಗ ಅಂತ ಹೇಳಬೇಕು ಅನಿಸ್ತದ. ಏನು ಮಾಡೋದು? ತಾಯಿ ಕರುಳು ಹೆಂಗ ಬಿಡತೈತಿ?' ಸಂಸಾರದ ಮಾತು ಬಂತೆಂದರೆ ಸಾಕು ಅವಳೊಡಲ ಜ್ವಾಲಾಮುಖಿ ಸಿಡಿಯುತ್ತಿತ್ತು. ತಾನು ಸಣ್ಣವಳಾಗಿದ್ದಾಗಿನಿಂದ ದಾಟಿ ಬಂದಿರುವ ತಾಪತ್ರಯಗಳನ್ನು ಒಂದೊಂದೇ ಹೇಳುತ್ತ ಗಂಡ ಮತ್ತು ತನ್ನ ಮಕ್ಕಳು ತನ್ನ ಬಾಳನ್ನು ಹೇಗೆ ನರಕವಾಗಿಸಿದರೆಂದು ಹೇಳುತ್ತ ಹಲುಬುತ್ತಾಳೆ. ಅಷ್ಟಾದರೂ ಬದುಕು ಛಿದ್ರವಾಗಿ ಸಿಡಿದು ಹೋಗದಂತೆ ತಾನು ತಡೆಹಿಡಿದೆನೆಂಬ ಹೆಮ್ಮೆಯೂ ಅವಳಿಗಿದೆ. ಏನು ಮಾಡುವುದು? ತನ್ನ ನಸೀಬಕ್ಕೆ ಕೆಟ್ಟ ಮಕ್ಕಳು ಹುಟ್ಟಿದರು! ತನ್ನ ಮನೆತನದ ಇತಿಹಾಸ ಹಾಗೂ ಪುರಾಣವನ್ನು ಎಳೆಎಳೆಯಾಗಿ ಹೇಳಿದಾಗಲೇ ಅವಳಿಗೆ ಸಮಾಧಾನ.

'ಹೋಗ್ಲಿ ಬಿಡಬೆ, ಎಷ್ಟೆ ಆದ್ರೂ ಸಂಬಂಧ ಹರಿಲಿಕ್ಕೆ ಆಗ್ತದೇನು? ಶಿವಣ್ಣ ಸದ್ಯದ ಮಟ್ಟಿಗೆ ನಿನ್ನಿಂದ ದೂರ ಇರಬಹುದು. ಆದರ ನನಗನಿಸ್ತದ, ತಾಯಿ ಮಗ ನೀವು ಮುಂದೆ ಒಂದು ದಿನ ಒಂದಾಗಿ ಬ್ಯಾರೆದವರನ್ನ ಕೆಟ್ಟ ಮಾಡ್ತೀರಿ, ಅಷ್ಟೇ' ಕಾಕಾ ದೊಡ್ಡದಾಗಿ ನಕ್ಕ. ಅವನ ಮಾತಿಗ ಸಿದ್ದಣ್ಣನೂ ನಕ್ಕ. 'ನೀನು ಏನೇ ಅಂದ್ರೂ ದುಂಡಪ್ಪಣ್ಣ, ನಾ ಜೀವಂತ ಇರೂತನ ಶಿವಣ್ಣ ನನ್ನ ಮಾರಿ ನೋಡೂದು ಬ್ಯಾಡ. ನಾ ಸತ್ತ ಮ್ಯಾಲೂ ನನ್ನ ಹೆಣಕ್ಕ ಮಣ್ಣು ಹಾಕೂದು ಬ್ಯಾಡ.' ಕಣ್ಣಂಚಿನಲ್ಲಿ ಕಾಣಿಸಿಕೊಂಡ ನೀರನ್ನು ಯಲ್ಲವ್ವ ಸೀರೆಯ ಸೆರಗಿನಿಂದ ತೊಡೆದಳು. ದುಂಡಪ್ಪಕಾಕಾ ಅವಳಿಗೆ ಸಾಂತ್ವನ ಹೇಳಿ ಎದ್ದುಹೋದ. ಮುದುಕಿಗೆ ಮಾಯವ್ವಳ ಗರ ಹೊಡೆದಿದೆಯೆಂದು ಊರವರು ಹೇಳುವುದು ಸರಿಯಾಗಿಯೇ ಇದೆ. ಅಣ್ಣ ಹಾಗೂ ಮಾಯವ್ವಳ ನಡುವಿರುವ ಬಾಂಧವ್ಯ ಯಾವ ಬಗೆಯದೆಂದು ತಿಳಿಯದೆ ಸಿದ್ದಣ್ಣನಿಗೂ ಗೊಂದಲವೋ ಗೊಂದಲ. ಯಾವುದ್ಯಾವುದೊ ವಿಚಾರ ಕಾಡುವುದು ಅದು ಅವ್ವ ಹೇಳುವಷ್ಟು ಗಂಭೀರವಾದದ್ದಲ್ಲ. ತಮಗೆ ಹಾನಿ ಮಾಡುವಂತಹುದ್ದು ಆಗಿಲ್ಲ. ಆದರೂ ಅವ್ವನಿಗೆ ಮಾಯಕ್ಕನ ಬಗ್ಗೆ ವಿಪರೀತ ಹೊಟ್ಟೆಕಿಚ್ಚು. ಅವಳಿಂದ ಭೀಕರ ಅಪಾಯ ಒದಗಲಿದೆ ಎಂದು ನಂಬಿದ್ದಾಳೆ.

ಶಿವಣ್ಣ ಮತ್ತು ಮಾಯಕ್ಕ ಇಬ್ಬರನ್ನೂ ಅವರು ಅಪರಾಧವೆಸಗುತ್ತಿರುವ ಹೊತ್ತಿನಲ್ಲಿ ಹಿಡಿದೆ ಹಿಡಿಯುತ್ತೇನೆಂದು ಅವ್ವ ಪ್ರತಿಜ್ಞೆ ಮಾಡಿದ್ದಾಳೆ! ಅವಳ ಪ್ರತಿಜ್ಞೆ ಊರಿಗೆ ಗೊತ್ತು! ಅಪರಾಧಿಗಳನ್ನು ಲೋಕಕ್ಕೆ ತೋರಿಸುವುದು ಅವಳ ಪ್ರಬಲ ಆಸೆ. ಪ್ರಬಲ ಆಸೆಯೊ, ಇಲ್ಲಾ ಅವಳಿಗೆ ಹಿಡಿದಿರುವ ಗೀಳೊ ಗೊತ್ತಾಗುವುದಿಲ್ಲ. ನಿಜವಾಗಿಯೂ ಅವ್ವನಿಗೆ ಮಾಯಕ್ಕನ ಗರ ಹೊಡೆದಿದೆ! ಕಣ್ಣಿಗೆ ಹಬ್ಬವಾಗಿ ಉದ್ದಕ್ಕೆ ಬೆಳೆದು ನಿಂತಿರುವ ಮೆಕ್ಕೆಜೋಳದ ದಂಟುಗಳು ಚೂರು ಅಲುಗಾಡಿದರೂ ಸಾಕು, ಜೋಳದ ತೆನೆಗಳು ಸ್ವಲ್ಪ ಆಚೀಚೆ ಬಾಗಿದರೂ ಸಾಕು, ತುದಿ ಎಲ್ಲಿದೆಯೆಂದು ತಿಳಿಯದಂತೆ ಮುಗಿಲಿಗೆ ಮುಟ್ಟಿರುವ ಕಬ್ಬಿನ ಸೋಗೆ ಸ್ವಲ್ಪ ಸರಿದಾಡಿದರೂ ಸಾಕು, ಹೊಲವೆಲ್ಲ ಹರಡಿ ನಿಂತಿರುವ ಹತ್ತಿಯ ಗಿಡಗಳ ಹಸಿರೆಲೆ ತುಸು ತೂಗಾಡಿದರೂ ಸಾಕು ಅಲ್ಲಿ ಶಿವಣ್ಣ ಮತ್ತ ಮಾಯಕ್ಕ ಮಲಗಿದ್ದಾರೆನ್ನುವ ಸಂಶಯ ಅವಳಿಗೆ.

ನೋಡಿಕೊಂಡು ಬರಲು ಅವರಿವರನ್ನು ಕಳಿಸುವಳು. ಅವರು ಬೆತ್ತಲಾಗಿರುವುದನ್ನು ಆಕೆಯ ಕಣ್ಣಿಂದ ನೋಡಲು ಸಾಧ್ಯವಿಲ್ಲವಂತೆ! 'ಹೇ, ಹುಡುಗಾ ನೀನು ನೋಡಿಬಾ, ಹೇಗೂ ಹುಡುಗ ಇದ್ದೀ.' ಎಲ್ಲರೂ ಒಲ್ಲೆಯೆನ್ನುವಾಗ ಅಪರಿಚಿತ ಹುಡುಗನೊಬ್ಬನನ್ನು 'ಅಲ್ಲಿ ಗಾಳಿಪಟ ಬಿದ್ದೇತಿ, ತಗೊಂಡು ಬರೋಗು' ಎಂದು ಅವನನ್ನು ಪುಸಲಾಯಿಸಿ ಅಲ್ಲಿಗೆ ಕಳಿಸುವರು. ಮುಂದಿನ ದೃಶ್ಯಕ್ಕಾಗಿ ಎಲ್ಲರೂ ತುದಿಗಾಲಲ್ಲಿ ನಿಲ್ಲುವರು. ಅಲ್ಲಿಗೆ ಹೋಗಿ ಮುಟ್ಟಲು ಹುಡುಗ ಎಷ್ಟು ತಡಮಾಡುತ್ತಿದ್ದಾನೆ! ಇವರಿಗೆ ಸಿಟ್ಟು ಬರುತ್ತಿತ್ತು. ಸಿಟ್ಟು ನಿರಾಶೆಯಲ್ಲಿ ಕೊನೆಯಾಗುತ್ತಿತ್ತು. ಯಾಕೆಂದರೆ ಅಲ್ಲಿ ಯಾರೂ ಇರುತ್ತಿರಲಿಲ್ಲ. ಕಡಿದಾಡುತ್ತ ಎರಡು ಬೆಕ್ಕು ಹೊರಹೋಗುತ್ತಿದ್ದವು! ಗಾಳಿಪಟ ಹುಡುಕಿಹೋಗಿದ್ದ ಹುಡುಗನ ಸಪ್ಪೆಮಾರಿ ಕಂಡು ಎಲ್ಲರಿಗೂ ನಗುವೆಂದರೆ ನಗು.

'ಯಲ್ಲವ್ವತ್ತಿ, ನಿನ್ನ ಕಾಟದ ಸಲುವಾಗಿ ಅವರು ಇಲಿಬೆಕ್ಕು ಆಗ್ಯಾರು ನೋಡು.' ಅಲ್ಲಿದ್ದವರೆಲ್ಲ ಹೊಟ್ಟೆ ಹುಣ್ಣಾಗುವಂತೆ ನಗುವರು. ಮಂದಿಯೆದುರಿಗೆ ಸಿದ್ದಣ್ಣನಿಗೆ ತಲೆ ತಗ್ಗಿಸಿದಂತಾಗುವುದು. ಸದ್ಯ ತಾನು ಹೋಗಲಿಲ್ಲ! ಶಿವಣ್ಣ ಒಳ್ಳೆಯವನೇ. ಎಲ್ಲರೂ ಅವನನ್ನು ಎಷ್ಟು ಮೆಚ್ಚಿಕೊಳ್ಳುತ್ತಾರೆ. ಅವ್ವ ಸುಮ್ಮನೆ ಕೆಟ್ಟದಾಗಿ ಬಿಂಬಿಸುತ್ತಿದ್ದಾಳೆ! 'ಏಯ್ ಸಿದ್ದಣ್ಣ, ಮಂದಿ ಶಿವಣ್ಣನನ್ನು ಯಾಕ ಹೊಗಳ್ತಾರು ಹೇಳು? ಅವರಿಗೆ ಚಹಾ ಕುಡಿಸ್ತಾನ, ಊಟ ಮಾಡಿಸ್ತಾನ. ಹೆಂಗಾದ್ರೂ ಹೊಟೇಲದಾಗ ಇರ್ತಾನು.' ಅವ್ವನಿಗೆ ಏನು ಭ್ರಾಂತಿಯೋ? ಹೊಟೇಲು ವ್ಯವಹಾರ ಮಾಯಕ್ಕನಿಗೆ ಯಾವುದು ಅಪರಾಧ, ಯಾವುದು ಅಲ್ಲವೆಂಬುದು ಗೊತ್ತಿಲ್ಲವೆ? ಯಾವುದನ್ನು ಮಾಡಬೇಕು, ಯಾವುದು ಮಾಡಬಾರದೆಂಬುದು ಆಕೆಗೆ ತಿಳಿದಿಲ್ಲವೆ? ಇತ್ತೀಚೆಗೆ ಶಿವಣ್ಣ ಕಾಕಾನ ಹೊಲಕ್ಕೆ ದುಡಿಯಲು ಹೋಗುತ್ತಿದ್ದ. ಸ್ವಂತ ಹೊಲದಲ್ಲಿ ದುಡಿಯುವುದನ್ನು ಬಿಟ್ಟು ದುಂಡಪ್ಪನ ಹೊಲಕ್ಕೆ ಕೂಲಿ ಮಾಡುವುದರ ಅಗತ್ಯವೇನೆಂದು ಯಲ್ಲವ್ವ ಎಲ್ಲರ ಮುಂದೆ ಹೇಳಿಕೊಂಡು ಕಾಕಾನನ್ನೂ ಶಿವಣ್ಣನನ್ನೂ ಬೈದುಕೊಂಡು ತಿರುಗಾಡಿದಳು. ದುಂಡಪ್ಪನೂ ಕೇಡು ಮಾಡಲು ನಿಂತಿದ್ದಾನೆಂದು ಅವನಿಗೂ ಶಾಪ ಹಾಕುವಳು. ಶಿವಣ್ಣನನ್ನು ಎಷ್ಟು ಬೈಯ್ದರೂ ಅವಳಿಗೆ ಸಮಾಧಾನವಿಲ್ಲ.

ಎಲ್ಲ ವ್ಯವಹಾರಗಳು ಒಂದರೊಳಗೊಂದು ಸೇರಿ ಸಿದ್ದಣ್ಣನಿಗೆ ಗೊಂದಲ ಎನಿಸುವುದು. ಅವ್ವನ ಅಳು ನೋಡಲಾರದೆ ಅಣ್ಣನನ್ನು ಕರೆತರಬೇಕೆಂದು ಹೊಟೇಲಿಗೆ ಬಂದರೆ ಕ್ಷಣಾರ್ಧದಲ್ಲಿ ಅವನ ರೋಷ ಇಳಿಯುತ್ತಿತ್ತು. ದೇವಣ್ಣ ಮತ್ತು ಮಾಯಕ್ಕನ ಕೈಯಲ್ಲಿ ಯಾವ ಮಂತ್ರದಂಡವಿದೆಯೊ ತಿಳಿಯುವುದಿಲ್ಲ. ಬಂದವನು ಶಿವಣ್ಣನ ತಮ್ಮ ಸಿದ್ದು ಎಂದು ಗೊತ್ತಾದೊಡನೆ ದೇವಪ್ಪ, ಮಾಯಕ್ಕ ಪ್ರೀತಿ ಸುರಿಸುವರು. 'ಕುಂಡ್ರೊ ಸಿದ್ದು. ಈ ಚಾದಂಗಡಿ ನಿನ್ನದೆ. ಏನು ತಿಂತೀಯ? ಬಿಸಿ ವಗ್ಗರಣಿ ಐತಿ. ಹಾಕಿ ಕೊಡಲೇನು?' ತಾನು ತಿನ್ನುತ್ತಿರುವುದು ಅಣ್ಣ ಕದ್ದುಕೊಂಡು ಹೋಗಿರುವ ಜೋಳದಿಂದ ಖರೀದಿಸಿರುವುದೆ? ತಾನು ರುಚಿರುಚಿಯಾಗಿ ಬಾಯಿ ಚಪ್ಪರಿಸುತ್ತಿರುವುದನ್ನು ಮಾಯಕ್ಕ ಮಾಡಿರುವುದೆ? ತುಂಬ ರುಚಿಯಾಗಿರುವ, ಬಾಯಲ್ಲಿಟ್ಟರೆ ಕರಗುವ, ಪುಟಾಣಿ ಹಿಟ್ಟು ಉದುರಿಸಿ, ತುಸು ನಿಂಬೆರಸ ಬೆರೆಸಿ ಕೊಟ್ಟಿರುವ ಈ ಸೂಸಲಾ ಅದೆಷ್ಟು ಸೊಗಸಾಗಿದೆ. ನೋಡಿದರೆ ಬಾಯಲ್ಲಿ ನೀರೂರಬೇಕು. ಸಿದ್ದು ಮೈಯೆಲ್ಲ ಬಾಯಾಗಿ ತಿನ್ನುತ್ತಿರಬೇಕಾದರೆ ಮಾಯಕ್ಕ ಪಕ್ಕದಲ್ಲಿ ಬಂದು ಕುಳಿತಳು.

'ಏ ಅಪ್ಪಿ, ಸೂಸಲಾ ಚೊಲೋ ಆಗೇತಿ. ಹೌದಲ್ಲೊ? ಎಲ್ಲಿ ಹೋಗ್ಯಾನ ನಿಮ್ಮಣ್ಣ? ಹೊಂಗಲಕ್ಕ ಹೋಗ್ಯಾನಂತಲ್ಲ? ಕಾಕಾನ ಜೋಡಿ? ಹೂಂ. ನೀನು ನಿಮ್ಮಣ್ಣಗ ಹೆದರಿ ಇಲ್ಲಿಗೆ ಬರೋದು ನಿಲ್ಲಿಸಬ್ಯಾಡ. 'ಪಾಪ, ಸಿದ್ದೂಗ ಏನಾದ್ರೂ ಬೈದ್ರ ನಿನ್ನ ಒಂದು ಕೈ ತಗೋತೇನಿ ಅಂತ ನಿಮ್ಮಣ್ಣಗ ವಾರ್ನಿಂಗ್ ಕೊಟ್ಟೇನಿ. ಕಾಲೇಜಿಗೆ ಹೋಗೋದು ಯಾಕ ಬಿಟ್ಟೆಯೊ? ಹೋಗಬೇಕಿತ್ತು. ನೀ ಶಾಣ್ಯಾ ಅದಿಯಂತ ಹೇಳ್ತಾರು. ಇನ್ನೊಂಚೂರು ಓದಿದ್ರ ನೌಕರಿ ಬರತಿತ್ತು. ಸುಮ್ಮಸುಮ್ಮನೆ ಬಿಟ್ಟೀನೋಡು. ಆಮ್ಯಾಲ ನಿಮ್ಮ ಅವ್ವ ನನ್ನನ್ನೇನೊ ಬಾಳ ಬೈಯತಿರತಾಳಂತ? ಯಾಕೊ ಸಿದ್ದು? ನಾಯೇನು ಅಂತಹ ಕೆಟ್ಟ ಕೆಲಸ ಮಾಡೇನಿ? ನಿಮ್ಮಣ್ಣಗ ಹಾಲಿನ ಡೇರಿದು ಒಳ್ಳೆ ಉದ್ಯೋಗ ಹುಡುಕಿಕೊಟ್ಟೇನಿ. ಆಕಿ ಏನಾದ್ರೂ ಅನ್ನಲಿ. ನಿನಗೂ ನಾನು ಕೆಟ್ಟಾಕಿ ಅಂತ ಕಂಡಬರ್ತೆನೇನು?' ಒಳ್ಳೆಯವಳೆಂದು ಹೇಳಿಬಿಟ್ಟೆ. ಅವ್ವ ಏನೆಂದುಕೊಳ್ಳುವಳೊ?

